ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ4[1]ಸ.ಪ್ರೌ.ಶಾ/ಅ.ಶಿ.ನೇಮಕ.01/2020-21 ದಿನಾಂಕ 10.02.2021

:ಜ್ಞಾಪನ:

ವಿಷಯ:-2020-21 ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:- 1) ಸರ್ಕಾರದ ಪತ್ರ ಸಂಖ್ಯೆ:ಇ.ಪಿ.127.ಯೋ.ಯೋ.ಕ.2020 ದಿನಾಂಕ:09.02.2021

2) ಜಿಲ್ಲೆಗಳಿಂದ ಸ್ವೀಕೃತವಾದ ಅಂಕಿ-ಅಂಶಗಳು ಮತ್ತು ಟಿಡಿಎಸ್ ತಂತ್ರಾಂಶದಿಂದ ಪಡೆಯಲಾದ ಖಾಲಿ ಹುದ್ದೆಗಳ ವರದಿ ಮಾಹಿತಿ

* * * *

ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿ ಮೇರೆಗೆ, ಫೆಬ್ರವರಿ-2021 ರಿಂದ ನೇರ ನೇಮಕಾತಿ ಮೂಲಕ ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳುವವರೆಗೆ ಅಥವಾ ಮೇ-2021 ರವರೆಗೆ ಅಥವಾ 2020-21ನೇ ಸಾಲಿನ ಶೈಕ್ಷಣಿಕ ಸಾಲಿನ ಅಂತ್ಯದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ, ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ ಸರ್ಕಾರಿ ಪ್ರೌಢಶಾಲೆಗಳಲ್ಲಿನ ಖಾಲಿ ಹುದ್ದೆಗಳಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಒಟ್ಟು 3473 ಅತಿಥಿ ಶಿಕ್ಷಕರನ್ನು ಅನುಬಂಧ(1)ರಲ್ಲಿ ತೋರಿಸಿರುವಂತೆ ಜಿಲ್ಲಾವಾರು ಮಂಜೂರು ಮಾಡಲಾಗಿರುತ್ತದೆ.

ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಿಗೆ ವೃಂದಬಲ ನಿಗದಿಗೊಳಿಸಿರುವ ಸರ್ಕಾರದ ಆದೇಶದ ಕ್ರಮಗಳನ್ನು ಮತ್ತು ಇಲಾಖಾ ಅಧಿಸೂಚನೆಯಲ್ಲಿನ ಸೂಚನೆಗಳನ್ನು ಪಾಲಿಸಿ ಪ್ರತಿ ಶಾಲೆಗೆ ಅಗತ್ಯವಿರುವ ಶಿಕ್ಷಕರ ಹುದ್ದೆಗಳ ಕುರಿತಂತೆ, ಶಾಲಾವಾರು ವೃಂದ ಮಂಜೂರಾತಿ ಕ್ರಮಗಳನ್ನು ಈಗಾಗಲೇ ಜಿಲ್ಲಾ ಹಂತದಲ್ಲಿ ನಿಯಮಾನುಸಾರ ಕೈಗೊಳ್ಳಲಾಗಿರುತ್ತದೆ. ಸದರಿ ಆಧಾರದಲ್ಲಿ ಎಲ್ಲಿ ಅಗತ್ಯ ಹುದ್ದೆಗಳು ಖಾಲಿ ಇವೆಯೋ ಅಂತಹ ಖಾಲಿ ಹುದ್ದೆಗಳಲ್ಲಿ ಅತಿಥಿ ಶಿಕ್ಷಕರನ್ನು ಆಯ್ಕೆ ಮಾಡಿಕೊಳ್ಳಲು ಪ್ರಸ್ತುತ ಲಭ್ಯವಿರುವ ಖಾಲಿ ಹುದ್ದೆಗಳ ಮಾಹಿತಿಯನ್ನಾಧರಿಸಿ ಲಗತ್ತಿಸಲಾಗಿರುವ ಅನುಬಂಧ-1ರಲ್ಲಿರುವಂತೆ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆ.

ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಸರ್ಕಾರದ ಆದೇಶದ ಕ್ರಮಗಳಂತೆ ಹಾಗೂ ಕೆಳಕಂಡ ಷರತ್ತುಗಳ ಮೇರೆಗೆ ಅನುಮತಿ ನೀಡಲಾಗಿದೆ.

1. ಶಿಕ್ಷಕರ ಸಂಪನ್ಮೂಲಗಳನ್ನು ಹೆಚ್ಚು ಆರ್ಥಿಕವಾಗಿ ಹೆಚ್ಚು ಪರಿಣಾಮಕಾರಿಯಾಗಿ ಬಳಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು
2. ಅನುದಾನಿತ ಶಾಲೆಗಳಲ್ಲಿ ಇರುವ ಹೆಚ್ಚುವರಿ ಶಿಕ್ಷಕರನ್ನು ಕೊರತೆ ಇರುವ ಸರ್ಕಾರಿ ಶಾಲೆಗಳಲ್ಲಿ (ಒ.ಒ.ಡಿ) ಆಧಾರದ ಮೇಲೆ ಹಂಚಿಕೆ ಮಾಡುವುದು
3. ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ ಅತಿಥಿ ಶಿಕ್ಷಕರ ಆಯ್ಕೆ ಜವಾಬ್ದಾರಿಯನ್ನು ಸಂಬಂಧಿಸಿದ ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರೇ ಮಾಡುವುದು
4. ಪ್ರೌಢ ಶಾಲಾ ಅತಿಥಿ ಶಿಕ್ಷಕರನ್ನು ಪ್ರಮುಖವಾಗಿ ಹುದ್ದೆ ಖಾಲಿ ಇರುವ ಹುದ್ದೆಗಳಿಗೆ ಮಾತ್ರ ನೇಮಿಸುವುದು
5. ವರ್ಗಾವಣೆ/ನೇಮಕಾತಿಗೆ ಅಧಿಸೂಚಿಸಿದ ಪ್ರೌಢ ಶಾಲಾ ಶಿಕ್ಷಕರು ನೇಮಕಗೊಂಡು ಕರ್ತವ್ಯಕ್ಕೆ ಹಾಜರಾದ ತಕ್ಷಣ ಅತಿಥಿ ಶಿಕ್ಷಕರ ಹುದ್ದೆಗಳು ತಂತಾನೆ ರದ್ದಾಗುವುದು.
6. ಅಗತ್ಯತೆಗೆ ತಕ್ಕಂತೆ ಖಾಲಿ ಹುದ್ದೆಗಳಿಗೆದುರಾಗಿ ವಿಷಯ ಶಿಕ್ಷಕರನ್ನು (ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ವೃತ್ತಿ ಶಿಕ್ಷಕರನ್ನು ಹೊರತುಪಡಿಸಿ) ಮಾತ್ರ ನೇಮಿಸುವುದು.
7. ಸರ್ಕಾರಿ ಪ್ರೌಢ ಶಾಲಾ ಅತಿಥಿ ಶಿಕ್ಷಕರ ಮಾಸಿಕ ಗೌರವ ಸಂಭಾವನೆ ರೂ.8000/- ಇರುತ್ತದೆ.
8. ಈ ಆದೇಶವು ಸರ್ಕಾರಿ ಪ್ರೌಢ ಶಾಲಾ ಅತಿಥಿ ಶಿಕ್ಷಕರ ನೇಮಕಾತಿಗೆ ಮಾತ್ರ ಅನ್ವಯಿಸುತ್ತದೆ.

ಮೇಲ್ಕಂಡ ವಿಷಯದಲ್ಲಿ ಯಾವುದೇ ಲೋಪದೋಷಗಳಾದಲ್ಲಿ ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು. ಯಾವುದೇ ಶಾಲೆಯಲ್ಲಿ ಅಗತ್ಯತೆಗೆ ಹೊರತಾಗಿ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡ ಪ್ರಕರಣಗಳನ್ನು ಗಮನಿಸಿದಲ್ಲಿ ಉಪನಿರ್ದೇಶಕರು (ಆಡಳಿತ) ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳು ನೇರ ಹೊಣೆಗಾರರಾಗುತ್ತಾರೆ. ಆಯ್ಕೆ ಮಾಡಿಕೊಂಡ ಅತಿಥಿ ಶಿಕ್ಷಕರ ತಾಲ್ಲೂಕು/ವಲಯವಾರು ವಿವರಗಳನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ಕ್ರೋಢೀಕರಿಸಿ, ದೃಢೀಕರಿಸಿ, ನಮೂನೆಯಲ್ಲಿ ಈ ಕಛೇರಿಗೆ ದಿನಾಂಕ 25.02.2021ರೊಳಗೆ ಪ್ರೌಢ ಶಾಲೆಗಳಿಗೆ ಸಂಬಂಧಪಟ್ಟಂತೆ ಸ್ಪೀಡ್ ಪೋಸ್ಟ್ ಮುಖಾಂತರವಾಗಿ ನಿರ್ದೇಶಕರು(ಪ್ರೌಢಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು. ಕೆಳಗಿನ ಮಾದರಿಯಂತೆ ಸಲ್ಲಿಸುವುದು. ವರದಿಯ ಸ್ಕ್ಯಾನ್ಡ್ ಪ್ರತಿಯನ್ನು ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಇ-ಮೇಲ್ est4cpibng@gmail.com ಮುಖಾಂತರ ಈ ಕಛೇರಿಗೆ ಸಲ್ಲಿಸುವುದು.

ನಮೂನೆ(ಪ್ರೌಢ ಶಾಲಾ ಅತಿಥಿ ಶಿಕ್ಷಕರ ನೇಮಕಾತಿ ವಿವರ)

ಜಿಲ್ಲೆಯ ಹೆಸರು :

ಜಿಲ್ಲೆಗೆ ಹಂಚಿಕೆ ಮಾಡಿರುವ ಒಟ್ಟು ಅತಿಥಿ ಶಿಕ್ಷಕರ ಸಂಖ್ಯೆ :

| ಕ್ರ.ಸಂ. | ತಾಲ್ಲೂಕಿನ ಹೆಸರು | ಹಂಚಿಕೆ ಮಾಡಲಾದ ಅತಿಥಿ ಶಿಕ್ಷಕರ ಸಂಖ್ಯೆ | ನೇಮಕಗೊಂಡ ಅತಿಥಿ ಶಿಕ್ಷಕರ ಸಂಖ್ಯೆ | ನೇಮಕವಾದ ಅತಿಥಿ ಶಿಕ್ಷಕರಿಗೆ ಗೌರವ ಸಂಭಾವನೆ ಪಾವತಿಸಲು ಅಗತ್ಯವಿರುವ ಅನುದಾನದ ಬೇಡಿಕೆ ಫೆಬ್ರವರಿ-21 ರಿಂದ ಮೇ-21ರವರೆಗೆ (ಪ್ರತಿ ಶಿಕ್ಷಕರಿಗೆ ರೂ.8000/-ರಂತೆ * 4 ತಿಂಗಳಿಗೆ) |
|---|---|---|---|---|
| | | | | |

ಅಡಕ :

1) ಉಲ್ಲೇಖ(1) ರ ಸರ್ಕಾರದ ಪತ್ರದ ಪ್ರತಿ

2) ಜಿಲ್ಲಾವಾರು ಹಂಚಿಕೆ ವಿವರದ ಅನುಬಂಧ 1

ನಿರ್ದೇಶಕರು (ಪ್ರೌಢ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ರವರ ಅಗತ್ಯ ಕ್ರಮಕ್ಕಾಗಿ

ರಾಜ್ಯದ ಎಲ್ಲಾ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಜಿಲ್ಲಾ ಉಪನಿರ್ದೇಶಕ ಮೂಲಕ) ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಅಪರ ಆಯುಕ್ತರು, ಗುಲ್ಬರ್ಗಾ / ಧಾರವಾಡ, ಇವರ ಮಾಹಿತಿ ಹಾಗು ಕ್ರಮಕ್ಕಾಗಿ.
4. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಮಾನ್ಯ ಆಯುಕ್ತರ ಗಮನಕ್ಕೆ ತರಲು ಕೋರಿ ಮಾಹಿತಿಗಾಗಿ ನೀಡಿದೆ.
5. ಹಿರಿಯ ಸಹಾಯಕ ನಿರ್ದೇಶಕರು (ಇ-ಆಡಳಿತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ
6. ಕಛೇರಿ ಪ್ರತಿ.

ಅನುಬಂಧ–1

**2020–21ನೇ ಸಾಲಿಗೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಸಹ ಶಿಕ್ಷಕರ ಹುದ್ದೆಗಳಿಗೆ ಸಂವಾದಿಯಾಗಿ ಅತಿಥಿ ಶಿಕ್ಷಕರ ಜಿಲ್ಲಾವಾರು ಹಂಚಿಕೆ ಪಟ್ಟಿ**

| ಕ್ರಮಸ | ವಿಭಾಗ | ಜಿಲ್ಲೆ | ಜಿಲ್ಲಾ ಉಪನಿರ್ದೇಶಕರಿಂದ ಸಲ್ಲಿಕೆಯಾದಂತೆ ಅತಿಥಿ ಶಿಕ್ಷಕರ ಬೇಡಿಕೆ |
|---|---|---|---|
| 1 | [1] ಬೆಂಗಳೂರು | ಬೆಂಗಳೂರು ಉತ್ತರ | 24 |
| 2 | | ಬೆಂಗಳೂರು ದಕ್ಷಿಣ | 27 |
| 3 | | ರಾಮನಗರ | 51 |
| 4 | | ಬೆಂಗಳೂರು ಗ್ರಾಮಾಂತರ | 0 |
| 5 | | ಚಿಕ್ಕಬಳ್ಳಾಪುರ | 62 |
| 6 | | ಕೋಲಾರ | 83 |
| 7 | | ಮಧುಗಿರಿ | 77 |
| 8 | | ತುಮಕೂರು | 21 |
| 9 | | ದಾವಣಗೆರೆ | 5 |
| 10 | | ಚಿತ್ರದುರ್ಗ | 20 |
| 11 | | ಶಿವಮೊಗ್ಗ | 60 |
| | | [1]ರ ಒಟ್ಟು | **430** |
| 12 | [2] ಮೈಸೂರು | ಚಾಮರಾಜನಗರ | 62 |
| 13 | | ಮೈಸೂರು | 70 |
| 14 | | ಮಂಡ್ಯ | 174 |
| 15 | | ಉಡುಪಿ | 86 |
| 16 | | ದಕ್ಷಿಣ ಕನ್ನಡ | 135 |
| 17 | | ಕೊಡಗು | 21 |
| 18 | | ಚಿಕ್ಕಮಗಳೂರು | 93 |
| 19 | | ಹಾಸನ | 167 |
| | | [2]ರ ಒಟ್ಟು | **808** |
| 20 | [3] ಬೆಳಗಾವಿ | ಹಾವೇರಿ | 57 |
| 21 | | ಗದಗ್ | 74 |
| 22 | | ಧಾರವಾಡ | 72 |
| 23 | | ಚಿಕ್ಕೋಡಿ | 301 |
| 24 | | ಬೆಳಗಾವಿ | 133 |
| 25 | | ಬಾಗಲಕೋಟೆ | 129 |
| 26 | | ವಿಜಯಪುರ | 134 |
| 27 | | ಶಿರಸಿ | 62 |
| 28 | | ಉತ್ತರ ಕನ್ನಡ | 20 |
| | | [3]ರ ಒಟ್ಟು | **982** |
| 29 | [4] ಕಲಬುರಗಿ | ಯಾದಗಿರಿ | 196 |
| 30 | | ಕಲಬುರಗಿ | 231 |
| 31 | | ಕೊಪ್ಪಳ | 107 |
| 32 | | ರಾಯಚೂರು | 250 |
| 33 | | ಬೀದರ್ | 113 |
| 34 | | ಬಳ್ಳಾರಿ | 356 |
| | | [4]ರ ಒಟ್ಟು | **1253** |
| | | [1] ರಿಂದ [4]ರ ಒಟ್ಟು | **3473** |

ನಿರ್ದೇಶಕರು (ಪ್ರೌಢ ಶಿಕ್ಷಣ)